**ದಿನಾಂಕ: 30-03-2015 ಸೋಮವಾರದಂದು ಅಪರಾಹ್ನ 3.00 ಗಂಟೆಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ 2015-16 ನೇ ಸಾಲಿಗೆ ಮುಂದುವರೆದ ಯೋಜನೆಗಳನ್ನು ಮುಂದುವರೆಸುವ ಬಗ್ಗೆ ನಡೆದ ಸಭೆಯ ನಡವಳಿಗಳು**

*****

ಹಾಜರಾದ ಅಧಿಕಾರಿಗಳ ಪಟ್ಟಿ ಲಗತ್ತಿಸಿದೆ.

ಪ್ರಪ್ರಥಮವಾಗಿ ಅಧ್ಯಕ್ಷರು, ಸಭೆಗೆ ಆಗಮಿಸಿದ್ದ ಕಾರ್ಯದರ್ಶಿ(ಪಂ.ರಾಜ್) ಹಾಗೂ ಇಲಾಖಾ ಅಧಿಕಾರಿಗಳನ್ನು ಸ್ವಾಗತಿಸಿ ವಿಷಯಸೂಚಿಯಂತೆ ಪರಿಶೀಲನೆ ಕೈಗೊಂಡು, ಚರ್ಚೆ ನಡೆಸಿ ಸಭೆಯು ಈ ಕೆಳಕಂಡ ನಿರ್ಣಯಗಳನ್ನು ಕೈಗೊಂಡಿತು.

1. 2015-16 ನೇ ಸಾಲಿನ ಯೋಜನಾವಾರು ಆಯವ್ಯಯ ನಿಗದಿಪಡಿಸಿರುವುದು ಕೆಳಗೆ ನಮೂದಿಸಿದ್ದು, ಅದಕ್ಕೆ ಆರ್ಥಿಕ ಇಲಾಖೆ ಮತ್ತು ಯೋಜನಾ ಇಲಾಖೆ ಅಧಿಕಾರಿಗಳ ಸಮ್ಮತಿ ಕೋರಲಾಗಿ, ಎರಡೂ ಇಲಾಖೆಗಳು ಸಮ್ಮತಿ ವ್ಯಕ್ತಪಡಿಸಿದರು.

( ರೂ. ಕೋಟಿಗಳಲ್ಲಿ)

| | ಯೋಜನೆ | | | ಯೋಜನೇತರ | | | ಯೋಜನೆ & ಯೋಜನೇತರ |
|---|---|---|---|---|---|---|---|
| | ರಾಜ್ಯ | ಕೇಂದ್ರ | ಒಟ್ಟು | ರಾಜ್ಯ | ಕೇಂದ್ರ | ಒಟ್ಟು | ಒಟ್ಟು |
| ರಾಜ್ಯವಲಯ | 4178 | – | 4178 | 87 | – | 87 | 4265 |
| ಜಿಲ್ಲಾವಲಯ | 3346 | 11 | 3357 | 2311 | – | 2311 | 5668 |
| ಒಟ್ಟು | 7524 | 11 | 7535 | 2398 | – | 2398 | 9933 |

ಮೇಲಿನಂತೆ ಸರ್ಕಾರದ ಆದೇಶ ಹೊರಡಿಸಲು ಕ್ರಮ ಕೈಗೊಳ್ಳಲು ಸೂಚಿಸಿದರು.

2. ರಾಜ್ಯವಲಯ ಯೋಜನೆಗಳಾದ NRDWP, N.G.N.R., PMGSY, ಸುವರ್ಣ ಗ್ರಾಮೋದಯ, ನಬಾರ್ಡ್ ರಸ್ತೆಗಳು, RGPSA, NBA(ಇಡುಗಂಟು ಅನುದಾನ), NRLM((ಇಡುಗಂಟು ಅನುದಾನ) ಇವೇ ಮುಂತಾದ ಯೋಜನೆಗಳಡಿ ಆಯವ್ಯಯದಲ್ಲಿ ನಿಗದಿಪಡಿಸಿರುವ SDP, SCP, TSP ಹಾಗೂ ಸಾಮಾನ್ಯ ಅನುದಾನಗಳಡಿ ಜಿಲ್ಲಾವಾರು ಅನುದಾನ **ದಿನಾಂಕ 9-4-2015 ರೊಳಗೆ ಹಂಚಿಕೆ ಮಾಡಿ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ತಿಳಿಸಿ, ಅದರ ಪ್ರತಿಯನ್ನು ಪಿ.ಎಂ.ಐ. ಶಾಖೆಗೆ ಗುರುತಿಸಲು ಸೂಚಿಸಿದರು.**

3. ಎನ್.ಆರ್.ಎಲ್.ಎಂ. ಯೋಜನೆಯ SCP ಯಡಿ ರೂ. 20 ಕೋಟಿಗಳನ್ನು ಮತ್ತು NGNR SCP ಯಡಿ ರೂ. 20 ಕೋಟಿಗಳನ್ನು ಒಟ್ಟಾರೆ ರೂ. 40 ಕೋಟಿಗಳನ್ನು ಪ್ರಧಾನಮಂತ್ರಿ ಆದರ್ಶ ಗ್ರಾಮ ಯೋಜನೆಗೆ ಹಾಗೂ TSP ಯಡಿ ನಿಗದಿಪಡಿಸಿರುವ ರೂ. 22.50 ಕೋಟಿಗಳಲ್ಲಿ ರೂ. 10.00 ಕೋಟಿ ಗಳನ್ನು ಸುವರ್ಣ ಗ್ರಾಮೋದಯ ಯೋಜನೆಗೆ ಮರುಹಂಚಿಕೆ ಮಾಡಿಕೊಡಲು ಕೋರಿ ಆಂತರಿಕ ಆರ್ಥಿಕ ಸಲಹೆಗಾರ ರವರು ಸೂಕ್ತ ಪ್ರಸ್ತಾವನೆ ಸಲ್ಲಿಸುವುದು.

4. ದಿನಾಂಕ 6-4-2015 ರಂದು ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆಯಲಿರುವ SCP, TSP ಸಭೆಗೆ ರಾಜ್ಯ ಹಾಗೂ ಜಿಲ್ಲಾ ವಲಯ ಯೋಜನೆಗಳಡಿ ನಿಗದಿಪಡಿಸಿರುವ SCP, TSP ಅನುದಾನದಡಿ ಯಾವ ಯಾವ ಸ್ವರೂಪದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು ಹಾಗೂ ಅದು ಹೇಗೆ SC, ST ಜನಾಂಗದವರ ಅಭಿವೃದ್ಧಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಾಯವಾಗಲಿರುವುದು ಎಂಬುದರ ಬಗ್ಗೆ

ಸವಿವರ ಮಾಹಿತಿಗಳನ್ನು **ದಿನಾಂಕ 4-4-2015 ರೊಳಗೆ ಪಿ.ಎಂ.ಐ. ಶಾಖೆಗೆ ನೀಡಲು ತಿಳಿಸಲಾಯಿತು.**

5. 2014-15 ನೇ ಸಾಲಿನಲ್ಲಿ ವಿನಿಯೋಗಿಸಲಾದ ಅನುದಾನ ಪರಿಶೀಲನೆ ನಡೆಸಿ, ಯಾವುದೇ ಕಾರಣಕ್ಕೂ ಅನುದಾನ ವ್ಯಪಗತವಾಗದಂತೆ ಎಚ್ಚರಿಕೆ ಕ್ರಮ ಕೈಗೊಳ್ಳುವುದು.

6. ಯೋಜನಾ ಇಲಾಖೆ ನಿಗದಿಪಡಿಸಿರುವ ನಿಗದಿತ ನಮೂನೆಯಲ್ಲಿ 12 ತಿಂಗಳುಗಳ ಆರ್ಥಿಕ ಮತ್ತು ಭೌತಿಕ ಗುರಿಗಳ ಎಂಪಿಕ್ ಹಾಳೆಯಲ್ಲಿ ಮಾಹಿತಿಯನ್ನು **ದಿನಾಂಕ 9-4-205 ರೊಳಗೆ ನೀಡಲು ಕ್ರಮವಹಿಸುವುದು.**

7. RFD ಯಡಿ GPs attaining Nirmal Status ನಡಿ ಶೂನ್ಯ ಪ್ರಗತಿ ಹಾಗೂ ಉಡುಪಿ, ಮೈಸೂರು, ಗದಗ್ ಜಿಲ್ಲಾ ಪಂಚಾಯತ್‌ಗಳ ಲೈನ್ ಇಲಾಖೆಗಳ ಆರ್.ಎಫ್.ಡಿ., 27 ಜಿಲ್ಲಾ ಪಂಚಾಯತ್‌ಗಳ ಎಲ್ಲಾ ತಾಲ್ಲೂಕುಗಳ ಆರ್.ಎಫ್.ಡಿ. ಹಾಗೂ ಸದರಿ ತಾಲ್ಲೂಕು ಪಂಚಾಯತ್‌ಗಳ ಶೇ. 10 ಗ್ರಾಮ ಪಂಚಾಯತಿಗಳ RFD ಮತ್ತು KRIDL, SIRD, KRRDA, KSBFB, MGIRED ಸಂಸ್ಥೆಗಳ RFD ತಯಾರಿಸಿರುವ ಬಗ್ಗೆ ನಿರ್ದೇಶಕರು, ಪಂಚಾಯತ್ ರಾಜ್ – I & II ಹಾಗೂ ನಿರ್ದೇಶಕರು, SIRD ರವರು ಸೂಕ್ತ ವರದಿ ನೀಡುವುದು.

8. Mandatory Objectives ನಲ್ಲಿ RTI ನಡಿ ವಿಲೇವಾರಿ ಮಾಡಿರುವ ಅರ್ಜಿಗಳು ಹಾಗೂ Grievance Redressal Cell ಬಗ್ಗೆ ಸಾಧಿಸಿರುವ RFD ಪ್ರಗತಿ ವರದಿ ಜಂಟಿ ಕಾರ್ಯದರ್ಶಿ(ಆ) ರವರು ಕ್ರೋಢೀಕರಿಸಿ ತುರ್ತು ನೀಡಲು ಕ್ರಮವಹಿಸುವುದು.

9. Mandatory Objectives ನಡಿ 2015-16 ನೇ ಸಾಲಿನಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಮೌಲ್ಯಮಾಪನ ಅಧ್ಯಯನ ವಿಷಯಗಳನ್ನು ದಿನಾಂಕ 9-4-2015 ರೊಳಗೆ ನೀಡಲು ಅಗತ್ಯಕ್ರಮವಹಿಸುವುದು.

10. 2014-15 ನೇ ಸಾಲಿನಲ್ಲಿ ತಾಲ್ಲೂಕು ಮಟ್ಟದಲ್ಲಿ ಸಾಧಿಸಿರುವ ಪ್ರಗತಿಯನ್ನು ಗಣನೆಗೆ ತೆಗೆದುಕೊಂಡು ಇಲಾಖೆ ಅನುಷ್ಠಾನಗೊಳಿಸಿದ ಪ್ರಮುಖ 8 ಯೋಜನೆಗಳಡಿ (MGNREGA, NRDWP, NBA, N.G.N.R. PMGSY, ಸುವರ್ಣ ಗ್ರಾಮೋದಯ, NRLM, ಪಂಚಾಯತ್ ರಾಜ್ ಶಾಖೆಯ ಡಿಸಿಬಿ, ಪರಿಷ್ಕೃತ ಕರ ನಿರ್ಧರಣೆ) ಪ್ರತಿ ಡಿವಿಜನ್‌ಗೆ ತಾಲ್ಲೂಕು ಮಟ್ಟದಲ್ಲಿ 3- ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ/ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳು(ಪ್ರತಿ 8 ಯೋಜನೆಯಡಿ ಪ್ರತ್ಯೇಕವಾಗಿ) ಒಟ್ಟಾರೆ 96 ಪ್ರಶಸ್ತಿ ಪುರಸ್ಕಾರಗಳನ್ನು ನೀಡಲು ಅಗತ್ಯವಿರುವ ಮಾಹಿತಿ ನಿಗದಿತ ನಮೂನೆ ಸಿದ್ಧಪಡಿಸಿ ಸಂಗ್ರಹಿಸಲು ನಿರ್ದೇಶಕರು, ಸ್ವ.ಉ.ಕಾ. ರವರು ಅಗತ್ಯಕ್ರಮ ಕೈಗೊಳ್ಳುವುದು.

11. ಜೊತೆಗೆ, 4 ಕಂದಾಯ ವಿಭಾಗಗಳಲ್ಲಿ ಪ್ರತಿಯೊಂದು ಕಂದಾಯ ವಿಭಾಗದಲ್ಲಿ ಒಬ್ಬ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಒಟ್ಟು 4 ಮುಖ್ಯ ಕಾರ್ಯನಿರ್ವಹಣಾಧಿಕಾರಿ ರವರುಗಳ ಸಾಧನೆ ಗುರುತಿಸಿ ಪ್ರಶಸ್ತಿ ಪುರಸ್ಕಾರ ನೀಡಲು ಕ್ರಮವಹಿಸುವುದು.

12. ದಿನಾಂಕ 20-4-2015 ರೊಳಗೆ ಮಾಹಿತಿ ಸಂಗ್ರಹಿಸಿ ದಿನಾಂಕ 30-4-2015 ರೊಳಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರಿಂದ ಅನುಕೂಲಕರ ದಿನಾಂಕ ಪಡೆದು ಸಮಾರಂಭ ಆಯೋಜಿಸಲು ಅಗತ್ಯಕ್ರಮ ವಹಿಸುವುದು.

(ಕ್ರಮ: ನಿರ್ದೇಶಕರು, ಸ್ವ.ಉ.ಕಾ.)

13. ಎಂ.ಜಿ.ಎನ್.ಆರ್.ಇ.ಜಿ.ಎ. ಯೋಜನೆಯಡಿ 9 ಅಂಶ ಕಾರ್ಯಕ್ರಮ ಹಾಗೂ ಆರ್.ಎಫ್.ಡಿ. ಯಡಿ ಸಾಧಿಸಿರುವ ಪ್ರಗತಿಯನ್ನು ಒಟ್ಟಾರೆ ಪುರಸ್ಕಾರಕ್ಕೆ Criteria ಆಗಿ ಪರಿಗಣಿಸುವುದು.

14. ರಸ್ತೆ ಪ್ರಗತಿಯಡಿ ಭೌತಿಕ ಪ್ರಗತಿ ಹಾಗೂ State level ಹಾಗೂ National Level Monitor ಗಳು ನಡೆಸಿದ ಗುಣ ನಿಯಂತ್ರಣ ಟಿಪ್ಪಣಿಗಳು ಒಟ್ಟಾರೆ Criteria ಆಗಿ ಒಳಪಡಿಸುವುದು.

15. ಇತರೆ ಯೋಜನೆಗಳಡಿ ಆರ್.ಎಫ್.ಡಿ. ಯಡಿ ನಿಗದಿಪಡಿಸಿರುವ ಅಂಶಗಳನ್ನು ಪರಿಗಣಿಸಬಹುದಾಗಿದೆಯೆಂಬ ಅಂಶವನ್ನು ಸಭೆಯು ಮನಗಂಡಿತು.

16. ಇದಕ್ಕೆ ಸೂಕ್ತ ನಿಗದಿತ ನಮೂನೆ ಸಿದ್ಧಪಡಿಸಿ ಕಾರ್ಯನಿರ್ವಹಣಾಧಿಕಾರಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರವರುಗಳಿಂದ ನಿಗದಿತ ದಿನಾಂಕದೊಳಗೆ ಮಾಹಿತಿ ಸಂಗ್ರಹಣೆಗೆ ಹೆಚ್ಚು ಒತ್ತು ನೀಡುವುದು.

*ಸಭೆ ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.*

*ನಡವಳಿಯ ಅಂಶಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಅನುಪಾಲನಾ ವರದಿಯನ್ನು ನಡವಳಿ ತಲುಪಿದ 3 ದಿನಗಳೊಳಗೆ ಪಿ.ಎಂ.ಐ. ಶಾಖೆಗೆ ನೀಡಲು ಕ್ರಮವಹಿಸುವುದು.*

ಸಹಿ/-
(ತ.ಮ. ವಿಜಯ ಭಾಸ್ಕರ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ನಿರ್ದೇಶಕರು
ಯೋಜನಾ ಉಸ್ತುವಾರಿ ಮತ್ತು ಮಾಹಿತಿ ವಿಭಾಗ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸಂಖ್ಯೆ:ಗ್ರಾಅಪ 28 ಯೋಉಮಾ 2014 ದಿನಾಂಕ 4-4-2015

**ಇವರಿಗೆ :**

1. ಆಯುಕ್ತರು, ಗ್ರಾಮೀಣಾಭಿವೃದ್ಧಿ, ಮ.ಗ್ರಾ.ರಾ.ಗ್ರಾ.ಉ.ಖಾ. ಯೋಜನೆ.
2. ಆಯುಕ್ತರು, ಕ.ಗ್ರಾ.ನೀ.ಸ. & ನೈರ್ಮಲ್ಯ ಇಲಾಖೆ, 2ನೇ ಮಹಡಿ, ಕೆಹೆಚ್‌ಬಿ ಕಾಂಪ್ಲೆಕ್ಸ್, ಕಾವೇರಿ ಭವನ, ಬೆಂಗಳೂರು.
3. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಮ.ಗ್ರಾ.ರಾ.ಗ್ರಾ.ಉ.ಖಾ. ಯೋಜನೆ.
4. ಜಂಟಿ ಕಾರ್ಯದರ್ಶಿ (ಆಡಳಿತ), ಗ್ರಾ.ಅ. & ಪಂ.ರಾಜ್ ಇಲಾಖೆ.
5. ನಿರ್ದೇಶಕರು, ಸಾಮಾಜಿಕ ತಪಾಸಣೆ, ಮ.ಗ್ರಾ.ರಾ.ಗ್ರಾ.ಉ.ಖಾ. ಯೋಜನೆ.
6. ಅಭಿಯಾನ ನಿರ್ದೇಶಕರು, ಎನ್.ಆರ್.ಎಲ್.ಎಮ್.,
7. ನಿರ್ದೇಶಕರು, ಇ-ಆಡಳಿತ.
8. ನಿರ್ದೇಶಕರು, ಪಂಚಾಯತ್ ರಾಜ್ 1 & 2.
9. ನಿರ್ದೇಶಕರು, ಸುವರ್ಣ ಗ್ರಾಮೋದಯ
10. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ತರಬೇತಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು.
11. ಆಂತರಿಕ ಆರ್ಥಿಕ ಸಲಹೆಗಾರರು.
12. ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ.

D/backup2/MPIC /30.3.15-proceedings

13. ಮುಖ್ಯ ಇಂಜಿನಿಯರ್, ಪಂ.ರಾಜ್‌ಇಂ.ಇಲಾಖೆ.
14. ಮುಖ್ಯ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು & ನೈರ್ಮಲ್ಯ ಇಲಾಖೆ.
15. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ.
16. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮ, ರಾಜಭವನ ರಸ್ತೆ, ಬೆಂಗಳೂರು.
17. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ.
18. ಕಾರ್ಯನಿರ್ವಾಹಕ ನಿರ್ದೇಶಕರು, ಎಂ.ಜಿ.ಐ.ಆರ್.ಇ.ಡಿ.
19. ನಿರ್ದೇಶಕರು, ಜಿಲ್ಲಾ ಯೋಜನಾ ವಿಭಾಗ, ಯೋಜನಾ ಇಲಾಖೆ.
20. ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, 5ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು.
21. ಅಪರ ಅಭಿಯಾನ ನಿರ್ದೇಶಕರು, ಎಸ್.ಬಿ.ಎ.
22. ಉಪ ನಿರ್ದೇಶಕರು, ಸ್ವ.ಉ.ಕಾ.
23. ಗಣಕ ಕೋಶದ ಮುಖ್ಯಸ್ಥರು, ಗ್ರಾ.ಅ.ಪಂ.ರಾಜ್ ಇಲಾಖೆ.

**<u>ಪ್ರತಿ ಮಾಹಿತಿಗಾಗಿ:-</u>**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿಯವರಿಗೆ.
2. ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿಯವರಿಗೆ.

## ಅನುಬಂಧ

***ದಿನಾಂಕ: 30-03-2015 ಸೋಮವಾರದಂದು ಅಪರಾಹ್ನ 3.00 ಗಂಟೆಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಪಟ್ಟಿ***

** **

1. ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಆಯುಕ್ತರು, ಗ್ರಾಮೀಣಾಭಿವೃದ್ಧಿ, ಮ.ಗಾ.ರಾ.ಗ್ರಾ.ಉ.ಖಾ. ಯೋಜನೆ.
3. ಆಯುಕ್ತರು, ಕ.ಗ್ರಾ.ನೀ.ಸ. & ನೈರ್ಮಲ್ಯ ಇಲಾಖೆ, 2ನೇ ಮಹಡಿ, ಕಾವೇರಿ ಭವನ, ಬೆಂಗಳೂರು.
4. ಸರ್ಕಾರದ ಜಂಟಿ ಕಾರ್ಯದರ್ಶಿ (ಆಡಳಿತ), ಗ್ರಾ.ಅ. & ಪಂ.ರಾಜ್ ಇಲಾಖೆ.
5. ಅಭಿಯಾನ ನಿರ್ದೇಶಕರು, ಎನ್.ಆರ್.ಎಲ್.ಎಮ್.,
6. ನಿರ್ದೇಶಕರು, ಸುವರ್ಣ ಗ್ರಾಮೋದಯ.
7. ನಿರ್ದೇಶಕರು, ಜಿಲ್ಲಾ ಯೋಜನಾ ವಿಭಾಗ, ಯೋಜನಾ ಇಲಾಖೆ.
8. ಆಂತರಿಕ ಆರ್ಥಿಕ ಸಲಹೆಗಾರರು.
9. ಮುಖ್ಯ ಇಂಜಿನಿಯರ್, ಪಂ.ರಾಜ್ ಇಂ.ಇಲಾಖೆ.
10. ಮುಖ್ಯ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು & ನೈರ್ಮಲ್ಯ ಇಲಾಖೆ.
11. ಮುಖ್ಯ ಅಭಿಯಂತರರು, ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮ.
12. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ.
13. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ.
14. ಕಾರ್ಯನಿರ್ವಾಹಕ ನಿರ್ದೇಶಕರು, ಎಂ.ಜಿ.ಐ.ಆರ್.ಇ.ಡಿ.
15. ನಿರ್ದೇಶಕರು, ಜಿಲ್ಲಾ ಯೋಜನಾ ವಿಭಾಗ, ಯೋಜನಾ ಇಲಾಖೆ.
16. ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, 5ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು.
17. ಅಪರ ಅಭಿಯಾನ ನಿರ್ದೇಶಕರು, ಎನ್.ಬಿ.ಎ.
18. ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ), ಗ್ರಾ.ಅ.ಪಂ.ರಾಜ್ ಇಲಾಖೆ.
19. ಸರ್ಕಾರದ ಅಧೀನ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಗ್ರಾ.ಅ.ಪಂ.ರಾಜ್ ಇಲಾಖೆ.
20. ಸರ್ಕಾರದ ಅಧೀನ ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ.
21. ಹಿರಿಯ ಉಪ ನಿರ್ದೇಶಕರು, ಜೈವಾನಿಲ.
22. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮ.